ಗಂಧದೆಣ್ಣೆ ಕಾರ್ಖಾನೆಗಳ ಬಗ್ಗೆ

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ)

ಮಾನ್ಯ ಗೃಹಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರತಿ ವರ್ಷ ತಯಾರಾಗುತ್ತಿರುವ ಗಂಧದೆಣ್ಣೆಯ ಪ್ರಮಾಣವೆಷ್ಟು?

ಆ) ಶಿವಮೊಗ್ಗ ಮತ್ತು ಮೈಸೂರಿನಲ್ಲಿರುವ ಗಂಧದೆಣ್ಣೆ ಕಾರ್ಖಾನೆಗಳು ಕಾರ್ಯ ನಡೆಸುತ್ತಿದೆಯೇ?

ಇ) ಅವುಗಳು ಎಷ್ಟು ಪ್ರಮಾಣದ ಎಣ್ಣೆಯನ್ನು ಉತ್ಪಾದಿಸುತ್ತಿವೆ?

ಶ್ರೀ ಜೆ ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ತಯಾರಾಗುತ್ತಿರುವ ಗಂಧದೆಣ್ಣೆಯ ಪ್ರಮಾಣ ಈ ಕೆಳಗಿನಂತಿದೆ.

	ಕೆ.ಜಿ.ಗಳಲ್ಲಿ
ಅಕ್ಟೋಬರ್ ೧೯೮೦ರಿಂದ	
ಮಾರ್ಚ್ ೧೯೮೧ರವರೆಗೆ	೪೫,೩೫೧
೧೯೮೧–೮೨	೨೨,೩೬೫
೧೯೮೨–೮೩	೬೨.೮೦೩
೧೯೮೩–೮೪	೫೮.೬೯೭
೧೯೮೪–೮೫	೪೯,೮೮೦
೧೯೮೫–೮೬	೫೫,೩೯೦
೧೯೮೬–೮೭	೩೬,೯೪೫ (ತಾತ್ಕಾಲಿಕ)
೧೯೮೭–೮೮ (ಡಿಸೆಂಬರ್ ೮೭ರವರೆಗೆ)	೧೧,೭೧೫ (ತಾತ್ಕಾಲಿಕ)

ಆ) ಹೌದು.

ಇ) ಮೇಲೆ (ಅ)ದಲ್ಲಿ ತೋರಿಸಿದಂತೆ

ರೇಷ್ಮೆ ಆಮದು ಬಗ್ಗೆ

೩೮೬. **ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).**—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ರೇಷ್ಮೆ ನೆಲೆ ಹಾಗೂ ರೇಷ್ಮೆ ಕೈಗಾರಿಕೆ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಯಾವ ಹೊಸ ಯೋಜನೆ ಕೈಗೊಳ್ಳಲಾಗಿದೆ.

(ಆ) ಕಳೆದ ೩ ವರ್ಷಗಳಲ್ಲಿ ಚೀನಾ ಜಪಾನ್ ದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗಿದೆಯೆ?ದಯೆಯೇ?. ಹಾಗೂ ಆಮದು ಮಾಡಿಕೊಂಡ ಪ್ರಮಾಣವೆಷ್ಟು ?

(ಇ) ಈ ರೇಷ್ಮೆಯನ್ನು ವಿತರಣೆ ಮಾಡಿದ ವಿವರ ಒದಗಿಸುವುದು ?

15

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಸಚಿವರು).—

(ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಉದ್ಯಮದ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಈ ಕೆಳಕಂಡ ಹೊಸ ಯೋಜನೆಗಳನ್ನು ಕೈಗೊಳ್ಳಲಾಗಿದೆ-

I. ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ ಮಧ್ಯಕಾಲಿಕ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಯೋಜನೆಗಳು.—

(ಅ) ಬಿತ್ತನೆ ಪ್ರದೇಶದಲ್ಲಿ ಬಿತ್ತನೆ ಕೋಠಿಗಳಿಗೆ ಮತ್ತು ಮಾರುಕಟ್ಟೆಗಳಿಗೆ ಸೂಕ್ತ ಕಟ್ಟಡಗಳ ನಿರ್ಮಾಣ.

(ಆ) ಬಿತ್ತನೆ ವಲಯಗಳಲ್ಲಿ ಮೌಂಟಿಂಗ್ ಹಾಲ್‌ಗಳ ನಿರ್ಮಾಣ.

(ಇ) ರೇಷ್ಮೆ ನೂಲು ಬಿಚ್ಚುವ ೧೩ ಸಂಕೀರ್ಣಗಳ ಸ್ಥಾಪನೆ.

(ಈ) ಪಿ೨ ಮತ್ತು ಪಿ೩ ರೇಷ್ಮೆ ಕೃಷಿ ಕ್ಷೇತ್ರಗಳ ಅಭಿವೃದ್ಧಿ.

II. ಬೆಲೆ ಸ್ಥಿರೀಕರಣ ನಿಧಿಯಲ್ಲಿ ತೆಗೆದುಕೊಂಡ ಯೋಜನೆಗಳು.—

(ಅ) ರೇಷ್ಮೆ ನೂಲು ಬಿಚ್ಚುವವರು ವಿನಿಮಯ ಕೇಂದ್ರದಲ್ಲಿ ರೇಷ್ಮೆ ಒತ್ತೆ ಇಟ್ಟು ಪಡೆದ ಮುಂಗಡ ಹಣದ ಬಡ್ಡಿಯನ್ನು ಸಹಾಯ ಧನದಿಂದ ಭರಿಸುವುದು.

(ಆ) ನೂಲು ಬಿಚ್ಚುವವರಿಗೆ ರೇಷ್ಮೆ ಸಾಗಾಣಿಕೆ ಸಹಾಯ.

(ಇ) ಹೊಸ ಪ್ರದೇಶದಲ್ಲಿ ಉತ್ಪತ್ತಿಯಾದ ರೇಷ್ಮೆ ಸಹಾಯಧನ.

(ಈ) ರೇಷ್ಮೆ ವ್ಯವಸಾಯಗಾರರ ಸಹಕಾರ ಸಂಘಗಳಿಗೆ ಮಾರ್ಜಿನ ಹಣ ಸಹಾಯ.

(ಉ) ನೂಲು ಬಿಚ್ಚುವವರಿಗೆ ತರಬೇತಿ.

(ಊ) ಮೈಸೂರು ಬಿತ್ತನೆ ಪ್ರದೇಶದಲ್ಲಿ ಆರೋಗ್ಯ ಪಾಲನೆ (Health Coverage) ಯೋಜನೆಯಲ್ಲಿ ಹೆಚ್ಚಿನ ಸಾಕುವ ಸಲಕರಣೆಗಳನ್ನು ವಂಚಿತರಾಗಿ ಒದಗಿಸುವುದು.

(ಋ) ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ ರೈತಭವನಗಳನ್ನು ಕಟ್ಟಿಸುವುದು.

(ಋೂ) ಮಾರುಕಟ್ಟೆಗಳಲ್ಲಿ ಬೇಕಾದ ಅನುಕೂಲತೆಗಳನ್ನು ಕಲ್ಪಿಸುವುದು.

(ಎ) ಮಾರುಕಟ್ಟೆಗಳ ಮತ್ತು ಬಿತ್ತನೆ ಕೋಠಿಗಳ ಕಟ್ಟಡಗಳ ನಿರ್ಮಾಣಕ್ಕೆ ಹಣ ಸಹಾಯ.

(ಏ) ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ಅಂಕಿಅಂಶಗಳ ಮಾಹಿತಿ ಸೆಂಗ್ರಹಿಸಲು ಕಂಪ್ಯೂಟರ್ ಅಳವಡಿಕೆ.

III. ವಿಶೇಷ ಘಟಕ ಯೋಜನೆಯಡಿಯಲ್ಲಿ ಸಾಮೂಹಿಕ ಅಭಿವೃದ್ಧಿ ಕೇಂದ್ರಗಳಸ್ಥಾಪನೆ

(ಅ) ಕಳೆದ ೩ ವರ್ಷಗಳಲ್ಲಿ ಜಪಾನ್ ದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಂಡಿರುವುದಿಲ್ಲ. ೮೫-೮೬ರಲ್ಲಿ ಚೈನಾ ದೇಶದಿಂದ ಕೇಂದ್ರೀಯ ರೇಷ್ಮೆ ಮಂಡಲಿಯ ವರದಿಯ ಪ್ರಕಾರ ೨೫ ಮೆ. ಟನ್ನಿಗಳಷ್ಟು ಕಚ್ಚಾ ರೇಷ್ಮೆಯನ್ನು ಕೇಂದ್ರ ಸರ್ಕಾರವು ಆಮದು ಮಾಡಿಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ. ಕಳೆದ ೩ ವರ್ಷಗಳಲ್ಲಿ ರೇಷ್ಮೆ ಪದಾರ್ಥಗಳ ರಫ್ತುದಾರರು ಕೇಂದ್ರ ಸರ್ಕಾರದ ಆಮದು ಮತ್ತು ರಫ್ತು ಪಾಲಿಸಿ ಪ್ರಕಾರ ವರ್ಷವೊಂದಕ್ಕೆ ೧೪೦೦ ರಿಂದ ೨೦೦೦ ಮೆ. ಟನ್ನುಗಳವರೆಗೆ ಆಮದು ಮಾಡಿಕೊಳ್ಳಲಾಗಿದೆಯೆಂದು ಅಂದಾಜಿಸಲಾಗಿದೆ.

(ಇ) ಚೈನಾ ದೇಶದಿಂದ ಆಮದು ಮಾಡಿಕೊಂಡ ೩೫ ಮೆ. ಟನ್ನು ರೇಷ್ಮೆಯನ್ನು ಕೇಂದ್ರ ರೇಷ್ಮೆ ಮಂಡಲಿಯವರೇ ವಿತರಣೆ ಮಾಡಿದ್ದಾರೆ. ಆ ವಿವರಗಳು ರಾಜ್ಯ ಸರ್ಕಾರದಲ್ಲಿರುವುದಿಲ್ಲ.